# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 129 ರಲ್ಲಿ ದಿನಾಂಕ: 19.12.2020 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 19.12.2020 ರಂದು ವಾರ್ಡ್ ಸಂಖ್ಯೆ 129ರ ಅಕ್ಟೋಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು.ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಹಾಜರಿದ್ದ ಸದಸ್ಯರು:-

1. ಶ್ರೀ.ವಿಶ್ವನಾಥ್, ಅಧೀಕ್ಷಕ ಅಭಿಯಂತರರು ದಾಸರಹಳ್ಳಿ ವಲಯ ಬಿಬಿಎಂಪಿ ಹಾಗೂ ವಾರ್ಡ್–129ರ ನೋಡಲ್ ಅಧಿಕಾರಿಗಳು.
2. ಶ್ರೀ ವಸಂತ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರು (ಘನತ್ಯಾಜ್ಯ ನಿರ್ವಹಣೆ).
3. ಶ್ರೀ.ವಿಜಯ್ ರಾಘವನ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ–129.
4. ಒಣತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ವಾರ್ಡ್ ಸಂಖ್ಯೆ–129
5. ಹಸಿ ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ವಾರ್ಡ್ ಸಂಖ್ಯೆ –129
6. ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು –ಕಲೀಲ್ ವಾರ್ಡ್ ಸಂಖ್ಯೆ –129
7. ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು –ಮಂಜೆಗೌಡ ವಾರ್ಡ್ ಸಂಖ್ಯೆ –129
8. ಶ್ರೀ. ಹನುಮಂತರಾಜು, ಕಂದಾಯ ನಿರೀಕ್ಷಕರು ಬಿಬಿಎಂಪಿ ವಾರ್ಡ್ ಸಂಖ್ಯೆ –129
9. ಶ್ರೀ.ಎಲ್.ರಂಗರಾಜು, ವಿಧಾನಸೌದ ಬಡಾವಣೆಯ ನಿವಾಸಿ
10. ಶ್ರೀ.ಈಶ್ವರಚಾರ್, ವಿಧಾನಸೌದ ಬಡಾವಣೆಯ ನಿವಾಸಿ
11. ಶ್ರೀ.ಎಸ್.ಕೆ.ಭಟ್, 14ನೇ ಬ್ಲಾಕ್ ನಾಗರಭಾವಿ 2ನೇ ಹಂತ ನಿವಾಸಿ
12. ಶ್ರೀ.ಡಿ.ವೈ.ದೇವ್ರು, 14ನೇ ಬ್ಲಾಕ್ ನಾಗರಭಾವಿ 2ನೇ ಹಂತ ನಿವಾಸಿ
13. ಶ್ರೀ.ರಾಮಣ್ಣ ಟಿ ಅಧ್ಯಕ್ಷರು, RWA ಎನ್.ಜಿ.ಇ.ಎಫ್ ಬಡಾವಣೆ, ಮಲ್ಲತ್ತಹಳ್ಳಿ
14. ಶ್ರೀ.ವೇಣುಗೋಪಾಲ್, ಎನ್.ಜಿ.ಇ.ಎಫ್ ಬಡಾವಣೆ, ನಾಗರಭಾವಿ 2ನೇ ಹಂತ

ವಾರ್ಡ್ ಸಂಖ್ಯೆ–129ರ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು.

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

### ❖ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದವಿಷಯಗಳು

➢ ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ದಿನಂಪ್ರತಿ ರಸ್ತೆ ಗುಡಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ಸಾರ್ವಜನಿಕರು ದೂರಿದ ಮೇರೆಗೆ ಉತ್ತರಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಪ್ರಸ್ತುತ ವಾರ್ಡ್‌ವ್ಯಾಪ್ತಿಯಲ್ಲಿ 2011ರ ಜನಗಣತಿ ಆಧಾರದಲ್ಲಿ ನಿಯೋಜಿಸಿರುವ ಪೌರಕಾರ್ಮಿಕರು ಸಂಖ್ಯೆ ತೀರ ಕಡಿಮೆ ಇರುವುದರಿಂದ ಮನೆಮನೆಗಳಿಂದ ಕಸ ಸಂಗ್ರಹಿಸಲು ಹಾಗೂ ಪ್ರಮುಖ ರಸ್ತೆಗಳಲ್ಲಿ ಕಸಗುಡಿಸಲು ನಿಯೋಜಿಸಲಾಗಿರುತ್ತದೆ ಪ್ರಸ್ತುತ ಪೌರಕಾರ್ಮಿಕರ ಕೊರತೆಯಿಂದ ಎಲ್ಲಾ

ರಸ್ತೆಗಳಲ್ಲಿ ಕಸಗುಡಿಸಲು ಸಾಧ್ಯವಾಗುತ್ತಿಲ್ಲವೆಂದು ಅಸಹಾಯಕತೆ ವ್ಯಕ್ತಪಡಿಸುತ್ತ ಹೆಚ್ಚುವರಿ ಪೌರಕಾರ್ಮಿಕರ ನೇಮಕಾತಿಗಾಗಿ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು ಹೆಚ್ಚುವರಿ ಪೌರಕಾರ್ಮಿಕರ ನೇಮಕದ ನಂತರ ದಿನಂಪ್ರತಿ ವಾರ್ಡ್‌ವ್ಯಾಪ್ತಿಯ ಎಲ್ಲಾ ರಸ್ತೆಗಳಲ್ಲಿ ಕಸಗುಡಿಸಲು ಆಗತ್ಯ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

- ಜನವರಿ 2021 ರಿಂದ ಒಣ ತ್ಯಾಜ್ಯವನ್ನು ಸಂಗ್ರಹಿಸಲು ಪ್ರತ್ಯೇಕವಾಗಿ ಗುತ್ತಿಗೆದಾರರನ್ನು ನಿಯೋಜಿಸಿದ್ದು, ದಿನಾಂಕ: 01.01.2021 ರಿಂದ ವಾರದಲ್ಲಿ ಎರಡು ದಿನ ಒಣ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತದೆ ಹಾಗೂ ಉಳಿದಂತೆ ಹಸಿ ತ್ಯಾಜ್ಯವನ್ನು ದಿನಂಪ್ರತಿ ಸಂಗ್ರಹಿಸಲಾಗುತ್ತದೆ ಯೆಂದು ಸಭೆಯಲ್ಲಿ ಹಾಜರಿದ್ದ ಸ.ಕಾ.ಅ ಘನತ್ಯಾಜ್ಯ ರವರು ಸಭೆಗೆ ಮಾಹಿತಿ ನೀಡಿದರು.

## ❖ ಕಾಮಗಾರಿ ವಿಭಾಗಕ್ಕೆಸಂಬಂಧಿಸಿದ ವಿಷಯಗಳು

- ನಾಗರಭಾವಿ ಎನ್.ಜಿ.ಇ.ಎಫ್ ಬಡಾವಣೆಯಲ್ಲಿ ಸಿಸಿಟಿವಿ ಹಾಗೂ ರಸ್ತೆ ನಾಮ ಫಲಕಗಳನ್ನು ಅಳವಡಿಸಲು ಸಭೆಯಲ್ಲಿ ಹಾಜರಿದ್ದ ನೃಪತುಂಗ ನಗರ ನಿವಾಸಿಗಳ ಸೇವಾ ಸಂಘ ರವರು ಮನವಿ ಸಲ್ಲಿಸಿದ ಮೇರೆಗೆ 2020–21ನೇ ಸಾಲಿನ ಅಯವ್ಯಯದ ಕ್ರಿಯಾ ಯೋಜನೆಯಲ್ಲಿ ಅಗತ್ಯ ಅನುದಾವನ್ನು ಮೀಸಲಿರಿಸಿ ಕಾಮಗಾರಿಯನ್ನು ನಿರ್ವಹಿಸಲು ಅಗತ್ಯ ಕ್ರಮ ವಹಿಸುವುದಾಗಿ ವಾರ್ಡ್ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು.

- ಪಾಪರೆಡ್ಡಿಪಾಳ್ಯದ ವಿಧಾನಸೌದ ಬಡಾವಣೆಯಲ್ಲಿ ರಸ್ತೆ ನಾಮಫಲಕಗಳನ್ನು ಅಳವಡಿಸಲು ಬಡಾವಣೆಯ ನಿವಾಸಿಗಳು ಕೋರಿದ ಮೇರೆಗೆ ಪ್ರಸ್ತುತ ಸದರಿ ಪ್ರದೇಶದ ರಸ್ತೆ ನಾಮಫಲಕಗಳನ್ನು ಅಳವಡಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಟೆಂಡರ್ ಪ್ರಕ್ರಿಯೆ ಮುಗಿದು, ಕಾರ್ಯಾದೇಶ ದೊರೆತ ಕೂಡಲೇ ನಾಮಫಲಕಗಳನ್ನು ಅಳವಡಿಸಲು ಕ್ರಮವಹಿಸುವುದಾಗಿ ವಾರ್ಡ್ ಅಭಿಯಂತರರು ತಿಳಿಸಿದರು.

- ವಾರ್ಡ್ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಬಿಬಿಎಂಪಿವತಿಯಿಂದ ಸ್ಥಾಪಿಸಲಾಗಿರುವ ಬ್ಯಾಚ್ ಮಿಕ್ಸ್ ಪ್ಲಾಂಟ್‌ನಿಂದ ಡಾಂಬರು ಮಿಶ್ರಣ ಪಡೆದು ಮುಚ್ಚಲಾಗುತ್ತಿದ್ದು, ಅದರಂತೆ ದಿನಾಂಕ: 30.11.2020 ರಂದು ಒಂದು ಲೋಡ್ ಡಾಂಬರು ಮಿಶ್ರಣ ಪಡೆದು ವಾರ್ಡ್ ಕಛೇರಿ ರಸ್ತೆ ಮತ್ತು ಈರಣ್ಣಪಾಳ್ಯ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. ಹಾಗೂ ಮತ್ತೊಂದು ಲೋಡ್ ಡಾಂಬರ್ ಮಿಶ್ರಣಕ್ಕಾಗಿ ಮನವಿ ಸಲ್ಲಿಸಲಾಗಿದ್ದು ಡಾಂಬರು ಮಿಶ್ರಣ ಲಭ್ಯವಾಗುತ್ತಿದಂತೆ ಆದ್ಯತೆ ಮೇರೆಗೆ ಪ್ರಮುಖ ರಸ್ತೆಗಳಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಕ್ರಮ ವಹಿಸುವುದಾಗಿ ವಾರ್ಡ್‌ಅಭಿಯಂತರರು ಸಭೆಗೆ ಮಾಹಿತಿ ತಿಳಿಸಿದರು.

## ❖ ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದ ವಿಷಯಗಳು

- ಬೀದಿ ಬದಿ ದೀಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ವಾರ್ಡ್ ಕಛೇರಿಯಲ್ಲಿ ದೂರು ಪುಸ್ತಕದಲ್ಲಿ ದಾಖಲಾಗಿರುವ ದೂರುಗಳ ಬಗ್ಗೆ ಆಗ್ಗಿಂದಾಗಲೇ ಮಾಹಿತಿ ಪಡೆದು ಕಾಲಾಮಿತಿಯಲ್ಲಿ ಪರಿಹರಿಸಲು ಅಗತ್ಯ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಬೀದಿ ದೀಪಗಳ ನಿರ್ವಹಣೆ ಗುತ್ತಿಗೆದಾರರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

- ಸಹಾಯ ಆ್ಯಪ್‌ನಲ್ಲಿ ದಾಖಲಾಗುವ ಆನ್‌ಲೈನ್ ದೂರುಗಳ ಬಗ್ಗೆ ಆದ್ಯತೆಯ ಮೇರೆಗೆ ತುರ್ತಾಗಿ ಕ್ರಮ ವಹಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ ನಿರ್ವಹಣೆ), ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿ ನಗರ ಉಪ ವಿಭಾಗರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸೂಚಿಸಿದರು ಹಾಗೂ ಸದರಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

ವಂದನೆಗಳೊಂದಿಗೆ,

ಕಾರ್ಯದರ್ಶಿಗಳು ವಾರ್ಡ್ ಸಮಿತಿ<br>ವಾರ್ಡ್ ಸಂಖ್ಯೆ–129.

ನೋಡಲ್ ಅಧಿಕಾರಿಗಳು<br>ವಾರ್ಡ್ ಸಂಖ್ಯೆ–129.

<u>ಪ್ರತಿಯನ್ನು:-</u>

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ನೋಡಲ್ ಅಧಿಕಾರಿಗಳು, ವಾರ್ಡ್–129 ರವರ ಮಾಹಿತಿಗಾಗಿ
3. ಜಂಟಿ ಆಯುಕ್ತರು, ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯ ರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ ಮಾಹಿತಿಗಾಗಿ
8. ಕಛೇರಿ ಪ್ರತಿ.